ದಿನಾಂಕಃ 27-09-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- ವಾದಿ ಪರ ಶ್ರೀ ಬಿ ಎನ ಕೆ ವಕೀಲರಿಂದ

ಮೃತ ವಾದಿ 1 ನನ್ನ ತಾಯಿ ಆಗಬೇಕು. ವಾದಿ 2 ನನ್ನ ತಂಗಿ ಆಗಬೇಕು. ಪ್ರತಿವಾದಿ ನನ್ನ ತಂದೆ ಆಗಬೇಕು. ಪ್ರತಿವಾದಿ 2 ಮತ್ತು 3 ರವರು ನನಗೆ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ.

ದಾವಾ ಆಸ್ತಿ ಶೆಡ್ಯೂಲ 2 ಡಿ ಮತ್ತು 2 ಇ ಆಸ್ತಿಗಳು ನಮ್ಮ ಕುಟುಂಬದ ಆಸ್ತಿಗಳು ಆಗಿರುವುದಿಲ್ಲ. ಉಳಿದ ಆಸ್ತಿಗಳು ನಮ್ಮ ಕುಟುಂಬದ ಆಸ್ತಿಗಳು ಆಗಿರುವವು. ದಾವಾ ಆಸ್ತಿ 2 ಡಿ, ಆರ ಎಸ ನಂ. 165/5 ವಿಸ್ತೀರ್ಣ 7 ಎಕರೆ 25 ಗುಂಟೆ ಜಮೀನು ನನ್ನ ತಂದೆಗೆ ಹೇಗೆ ಬಂದಿರುವುದು ಎಂದು ನನಗೆ ಗೊತ್ತಿರುವುದಿಲ್ಲ. ದಿಃ 15.11.1983 ರಂದು ವಾಟ್ನಿ ಮಾಡಿಕೊಂಡಿರುವರು. ಆಗ ನನಗೆ 12-13 ವಯಸ್ಸುಗಳು ಆಗಿದ್ದವು ಅಂದರೆ ಸರಿ. ಆಗ ನನಗೆ ಅಲ್ಪವಹಿ ಸಂರಕ್ಷಣಧಾರ ಅಂತಾ ನನ್ನ ತಂದೆ ಇದ್ದನು. ಆಗ ನನ್ನ ತಾಯಿ ಸಹ ಜೀವಂತ ಇದ್ದಳು ಅಂದರೆ ಸರಿ. 1983 ರಲ್ಲಿ ನನ್ನ ತಂದೆ ಮತ್ತು ನಾನು ಹಿಸ್ಸೆ ಮಾಡಿಕೊಂಡಿರುವೆವು. ನನ್ನ ತಾಯಿ ಮತ್ತು ನನ್ನ ತಂಗಿಗೆ ಯಾವುದೇ ಹಿಸ್ಸೆಯನ್ನು ನೀಡಿರುವುದಿಲ್ಲ. ನನ್ನ ತಾಯಿ ಮತ್ತು ತಂಗಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ನಾನು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

ನನ್ನ ಲಿಖಿತಪತ್ರದ ಖಂಡಿಕೆ 6 ಎ ದಲ್ಲಿನ ರಿ ಸನಂ. 158/5 ಬಿ ವಿಸ್ತೀರ್ಣ 2 ಗುಂಟೆಯಲ್ಲಿ 1 ಗುಂಟೆಯ ಜಮೀನು ಸಹ ಈ ದಾವಾ ಆಸ್ತಿ ಆಗಿರುವುದು ಆಗಿ ಎಂದು ಹೇಳಿದ್ದು ಅದಕ್ಕೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಹಾಜರುಪಡಿಸಿರುವೆನು. ಅದು ನನ್ನ ತಾಯಿಯ ಹೆಸರಿನಲ್ಲಿ ಇರುವುದು. ಆ ಆಸ್ತಿಯು ನನ್ನ ತಾಯಿಯ ಹೆಸರಿನಲ್ಲಿ ಇರುವುದಿಲ್ಲ ಹಾಗೂ ಆ ದಾವಾ ಆಸ್ತಿಯು ಸಹ ಅಸ್ತಿತ್ವದಲ್ಲಿ ಇರುವುದಿಲ್ಲ ಅಂದರೆ

ಸರಿಯಲ್ಲ. ವಾದಿಗೂ ಸಹ ದಾವಾ ಆಸ್ತಿಯಲ್ಲಿ ಹಿಸ್ಸೆ ಇರುವುದರಿಂದ ಆ ಕಾರಣಕ್ಕೆ ನಾನು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟಿ ಸವಾಲು ಪ್ರತಿವಾದಿ 1 ರಿಂದ 3 ರ ಪರ ಶ್ರೀ ಎಸ ಎ ಕೆ ವಕೀಲರಿಂದ

1 ನೇ ಪ್ರತಿವಾದಿ ನನಗೆ ತಂಗಿ ಆಗಬೇಕು. 1983 ರಲ್ಲಿ ನನ್ನ ಮತ್ತು ನನ್ನ ತಂದೆ ಮಧ್ಯೆ ಹಿಸ್ಸೆದಿಸ್ಸೆ ಆದ ಬಗ್ಗೆ ದಾಖಲಾತಿ ಇರುವುದು. ಆ ದಾಖಲಾತಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುವೆನು. ಸದರಿ ದಾಖಲಾತಿಯನ್ನು ಹಾಜರುಪಡಿಸದೇ ಇದ್ದರೂ ಸಹ ನಾನು ಹಾಜರುಪಡಿಸಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ಮಧ್ಯೆ ಯಾವುದೇ ಹಿಸ್ಸೆದಿಸ್ಸೆ ಆಗಿರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿ 2 ಎ ನನ್ನ ತಾಯಿಯ ಸಹೋದರ ಕಡೆಯಿಂದ ಬಂದ ಆಸ್ತಿ ಆಗಿರುವುದು ಅಂದರೆ ಸರಿ. ಈ ಆಸ್ತಿಯನ್ನು ನನ್ನ ತಂದೆಗೆ ಕಾಣಿಕೆಯಾಗಿ ನೀಡಿರುವರು ಅಂದರೆ ಸರಿಯಲ್ಲ. ಈ ಆಸ್ತಿಯನ್ನು ಅವರ ತಂಗಿಯನ್ನು ಚೆನ್ನಾಗಿ ನೋಡಿಕೊಂಡು ಹೋಗುವ ಸಲುವಾಗಿ ಅವಳ ಗಂಡನಿಗೆ ನೀಡಿರುವರು. ಅವಳ ಗಂಡ ನನ್ನ ತಂದೆ ಆಗಿರುವನು ಅಂದರೆ ಸರಿ. ಈ ಆಸ್ತಿಯು ನನ್ನ ತಂದೆಯ ಸಂಪೂರ್ಣ ಮಾಲೀಕತ್ವದ ಆಸ್ತಿ ಆಗಿರುವುದು ಅಂದರೆ ಸರಿಯಲ್ಲ. ಅದು ನನ್ನ ತಾಯಿಯ ಆಸ್ತಿ ಆಗಿರುವುದು. ನನ್ನ ಸಹೋದರ ಮಾವಂದಿರು ಈ ಆಸ್ತಿಯನ್ನು ನನ್ನ ತಾಯಿಗೆ ಬಿಟ್ಟುಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಅದು ನನ್ನ ತಾಯಿಗೆ ಕೊಟ್ಟಿರುವುದಾಗಿ ಎಂದು ಉತ್ತರಿಸುವರು. ಈ ಆಸ್ತಿಗೆ ನನ್ನ ತಾಯಿಯ ಹೆಸರು ದಾಖಲಾಗಿರುವುದಿಲ್ಲ. ಈ ಆಸ್ತಿಯು ನನ್ನ ತಾಯಿಯ ಆಸ್ತಿ ಆಗಿರುವುದಿಲ್ಲ ಅಂದರೆ ಸರಿಯಲ್ಲ. ಈ ಆಸ್ತಿಯು ನನ್ನ ತಾಯಿಯ ಹೆಸರಿನಲ್ಲಿ ದಾಖಲಾಗಿರುವುದು ಅಂದರೆ ಸರಿ. ನನ್ನ ತಾಯಿ 1980 ನೇ ಸಾಲಿನಿಂದ ಬೇರೆಯಾಗಿ ತವರು ಮನೆಯಲ್ಲಿ ವಾಸವಾಗಿರುವಳು. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಜೊತೆ 2 ವಿವಾಹ ಮಾಡಿಕೊಂಡಿರುವರು ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾರ ಜೊತೆಯಲ್ಲಿ ವಾಸವಾಗಿದ್ದನು ಎಂಬ ಪ್ರಶ್ನೆಗೆ ಸಾಕ್ಷಿ ಉತ್ತರಿಸುವುದೇನೆಂದರೆ 2 ನೇ ಪ್ರತಿವಾದಿ ನನ್ನ ತಾಯಿಯಾದ ಪಕ್ಕೀರವ್ವಳನ್ನು

ಓಡಿಸಿರುವಳು. 2 ನೇ ಪ್ರತಿವಾದಿ ಶೇಖಯ್ಯ ಎಂಬುವರ ಜೊತೆ ವಾಸವಾಗಿದ್ದಳು. 2 ನೇ ಪ್ರತಿವಾದಿಯ ದಾಖಲೆಗಳಲ್ಲಿ 1 ನೇ ಪ್ರತಿವಾದಿಯ ಹೆಂಡತಿ ಅಂತಾ ಹೆಸರು ದಾಖಲಾಗಿರುವುದು ಎಂಬ ಪ್ರಶ್ನೆಗೆ ಸಾಕ್ಷಿ ಉತ್ತರಿಸುವುದೇನೆಂದರೆ ದೌರ್ಜನ್ಯದಿಂದ ಆ ರೀತಿ ಹೆಸರು ಮಾಡಿಕೊಂಡಿರುವುದಾಗಿ ಎಂದು ಉತ್ತರಿಸುವರು. ಪ್ರತಿವಾದಿ 1 ಮತ್ತು 2 ರವರ ದಾಂಪತ್ಯ ಜೀವನದಿಂದ ಮಂಜವ್ವ ಜನ್ಮ ತಾಳಿರುವರು ಅಂದರೆ ಸರಿಯಲ್ಲ.

ದಾವಾ ಆಸ್ತಿ 2 ಎ ಯನ್ನು ಹೊರತುಪಡಿಸಿ ಉಳಿದ ಎಲ್ಲಾ ಆಸ್ತಿಗಳಲ್ಲಿ ವಾದಿ, ಪ್ರತಿವಾದಿಯರಿಗೆ ಸಮನಾದ ಹಿಸ್ಸೆ ಇದ್ದರೂ ಸಹಿತ ನನ್ನ ಮತ್ತು 1 ನೇ ಪ್ರತಿವಾದಿ ಮಧ್ಯೆ 1983 ರಲ್ಲಿ ಹಿಸ್ಸೆ ಮಾಡಿಕೊಂಡಿರುವುದಾಗಿ ಎಂದು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಸುಳ್ಳು ಲಿಖಿತಪತ್ರ ವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳ ಸವಣೂರ).